

International Journal of Kannada Research
www.kannadajournal.com

**ISSN: 2454–5813**
IJKR 2018; 4(4): 32-34
© 2018 IJKR
www.kannadajournal.com
Received: 08-08-2018
Accepted: 09-09-2018

**ಹನುಮಂತ ಜಿ**
ಸಂಶೋಧನಾ ವಿಧ್ಯಾರ್ಥಿ, ಸಮಾಜ ಕಾರ್ಯ ಅಧ್ಯಯನ ವಿಭಾಗ, ವಿಜಯನಗರ ಶ್ರೀ ಕೃಷ್ಣದೇವರಾಯ ವಿಶ್ವವಿದ್ಯಾಲಯ, ಸ್ನಾತಕೋತ್ತರ ಕೇಂದ್ರ ನಂದಿಹಳ್ಳಿ

**ಡಾ. ಪವಿತ್ರಾ ಆರ್ ಆಲೂರ್**
ಸಹಾಯಕ ಪ್ರಾಧ್ಯಾಪಕರು, ಸಮಾಜ ಕಾರ್ಯ ಅಧ್ಯಯನ ವಿಭಾಗ, ವಿಜಯನಗರ ಶ್ರೀ ಕೃಷ್ಣದೇವರಾಯ ವಿಶ್ವವಿದ್ಯಾಲಯ, ಸ್ನಾತಕೋತ್ತರ ಕೇಂದ್ರ ನಂದಿಹಳ್ಳಿ

**Correspondence**
**ಹನುಮಂತ ಜಿ**
ಸಂಶೋಧನಾ ವಿಧ್ಯಾರ್ಥಿ, ಸಮಾಜ ಕಾರ್ಯ ಅಧ್ಯಯನ ವಿಭಾಗ, ವಿಜಯನಗರ ಶ್ರೀ ಕೃಷ್ಣದೇವರಾಯ ವಿಶ್ವವಿದ್ಯಾಲಯ, ಸ್ನಾತಕೋತ್ತರ ಕೇಂದ್ರ ನಂದಿಹಳ್ಳಿ

# ಕೈಗಾರಿಕೆಗಳಲ್ಲಿ ಗುತ್ತಿಗೆ ಆಧಾರದ ಮೇಲೆ ಕಾರ್ಯನಿರ್ವಹಿಸುವ ಕಾರ್ಮಿಕರಿಗಿರುವ ಸೌಲಭ್ಯಗಳ ಕುರಿತು ಒಂದು ಆಧ್ಯಯನ

**ಹನುಮಂತ ಜಿ, ಡಾ. ಪವಿತ್ರಾ ಆರ್ ಆಲೂರ್**

**ಪ್ರಸ್ತಾವನೆ**
ಭಾರತದ ಬಹುತೇಕ ಕೈಗಾರಿಕೆಗಳಲ್ಲಿ ಮಾನವ ಸಂಪನ್ಮೂಲ ಬಳಕೆಯು ಕಂಪನಿಗಳ ಲಾಭದ ಹಿತದೃಷ್ಟಿಯಿಂದ ಗುತ್ತಿಗೆ ಆಧಾರದ ಮೇಲೆ ಕಾರ್ಮಿಕರನ್ನು ನೇಮಿಸಿಕೊಂಡು ಕನಿಷ್ಟ ಸಂಬಳ ಹಾಗೂ ಕನಿಷ್ಟ ಸೌಲಭ್ಯಗಳನ್ನು ಒದಗಿಸುವ ಮೂಲಕ ಅವರಿಂದ ಗರಿಷ್ಟ ಪ್ರಮಾಣದ ಲಾಭಾಂಶ ಮಾಡುವುದು ಮಾಲೀಕರ ಮುಖ್ಯ ಉದ್ದೇಶವಾಗಿದೆ, ಸರ್ಕಾರ ಹಾಗೂ ಸರ್ಕಾರೇತರ ಸಂಸ್ಥೆಗಳು ಮತ್ತು ದೊಡ್ಡ ದೊಡ್ಡ ಉದ್ದಿಮೆಗಳು ಗುತ್ತಿಗೆ ಕಾರ್ಮಿಕರ ಮೇಲೆಯೆ ಅವಲಂಬಿತವಾಗಿವೆ, ಉದ್ದಿಮೆದಾರರು ಕೈಗಾರಿಕೆಗಳಲ್ಲಿ ಕಾರ್ಯನಿರ್ವಹಿಸಲು ಅಗತ್ಯವಿರುವ ನುರಿತ, ಅರೆ ನುರಿತ ಹಾಗೂ ಕೌಶಲ್ಯರಹಿತ ಸಿಬ್ಬಂದಿಯನ್ನು ಹೊರ ಸಂಪನ್ಮೂಲಗಳಿಂದ ಅಂದರೆ ವ್ಯಕ್ತಿ, ನೋಂದಾಯಿತ ಸಂಸ್ಥೆಗಳ ಮೂಲಕ ನೇಮಕಾತಿ ಮಾಡಿಕೊಂಡು ಖಾಯಂ ನೌಕರರಿಗೆ ದೊರಕುವ ಸೌಲಭ್ಯ ಅಥವಾ ಕಲ್ಯಾಣ ಕಾರ್ಯಕ್ರಮಗಳನ್ನು ಗುತ್ತಿಗೆ ಕಾರ್ಮಿಕರಿಗೂ ಸಹ ಒದಗಿಸಿದರೆ ಸಂಸ್ಥೆಯ ಆದಾಯ ಕಡಿಮೆಯಾಗುತ್ತದೆ ಎಂಬ ಕಾರಣಕ್ಕೆ ಸಂಸ್ಥೆಯ ಉತ್ಪನ್ನ ಹಾಗೂ ಆದಾಯ ಹೆಚ್ಚಿಸುವ ನಿಟ್ಟಿನಲ್ಲಿ ಗುತ್ತಿಗೆ ಆಧಾರದ ಮೇಲೆ ಕಾರ್ಮಿಕರನ್ನು ನೇಮಿಸಿಕೊಂಡು ಗುತ್ತಿಗೆ ಕಾರ್ಮಿಕರಿಗೆ ವಂಚಿಸುತ್ತಿದ್ದಾರೆ. ಮಾನ್ಯ ಸರ್ವೋಚ್ಚ ನ್ಯಾಯಲಯವು ಖಾಯಂ ನೌಕರರಿಗೆ ದೊರಕುವ ವೇತನ ಹಾಗೂ ಸೌಲಭಗಳನ್ನು ಗುತ್ತಿಗೆ ಆಧಾರದ ಮೇಲೆ ಕಾರ್ಯನಿರ್ವಹಿಸುವ ಕಾರ್ಮಿಕರಿಗೂ ಸಹ ಒದಗಿಸಬೇಕೆಂದು ಆದೇಶವಿದ್ದರೂ ಇನ್ನುವರೆಗೂ ಅನುಷ್ಠಾನಗೊಂಡಿಲ್ಲ, 1970 ರಲ್ಲಿ ಗುತ್ತಿಗೆ ಕಾರ್ಮಿಕರಿಗೆ ಸಂಬಂಧಿಸಿದ ಕಾಯ್ದೆ ಜಾರಿಗೊಳಿಸಿ ಈ ಕಾಯ್ದೆ ಮುಖಾಂತರ ಕೈಗಾರಿಕೆಗಳಲ್ಲಿ ಕಾರ್ಯನಿರ್ವಹಿಸುವ ಗುತ್ತಿಗೆ ಕಾರ್ಮಿಕರಿಗೆ ಎರಡು ರೀತಿಯಾಗಿ ಕಾರ್ಮಿಕರ ಕಲ್ಯಾಣ ಕಾರ್ಯಕ್ರಮಗಳನ್ನು ನೊಡಬಹುದಾಗಿದೆ ಶಾಸನಾತ್ಮಕವಾದ ಕಾರ್ಯಕ್ರಮಗಳು ಹಾಗೂ ಶಾಸನಾತ್ಮಕವಲ್ಲದ ಕಾರ್ಯಕ್ರಮಗಳು ಪ್ರಮುಖವಾಗಿ ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಗುತ್ತಿಗೆ ಕಾರ್ಮಿಕರ ಸಾಮಾಜಿಕ ಭದ್ರತೆ ಹಾಗೂ ಕಾರ್ಮಿಕರ ಹಿತದೃಷ್ಟಿಯಿಂದ ಈ ಕೆಳಗಿನ ಕಾಯ್ದೆಗಳನ್ನು ಜಾರಿಗೊಳಿಸುವ ಮೂಲಕ ಹಲವಾರು ಕಾರ್ಮಿಕ ಕಲ್ಯಾಣ ಕಾರ್ಯಕ್ರಮಗಳನ್ನು ರೂಪಿಸಲಾಯಿತು.

**ಪ್ರಮುಖ ಪದಗಳು:** ಗುತ್ತಿಗೆ ಕಾರ್ಮಿಕರು, ಕಾಯ್ದೆಗಳು,ಉದ್ದಿಮೆದಾರರು,ಕೈಗಾರಿಕೆಗಳು.

**ಪೀಠಿಕೆ**

ಆಧುನಿಕ ಪ್ರಪಂಚದ ಪ್ರಮುಖವಾದವುಗಳಲ್ಲಿ ಕೈಗಾರೀಕರಣವು ಒಂದಾಗಿದ್ದು ಅತೀ ವೇಗವಾಗಿ ಬೆಳೆಯುತ್ತಿದೆ. ಕೈಗಾರಿಕೆಗಳು ಇಂದು ಮನುಷ್ಯನ ಜೀವಾನಾಡಿಯಾಗಿವೆ. ಕೈಗಾರಿಕೆಗಳಲ್ಲಿ ಕಾರ್ಯನಿರ್ವಹಿಸಲು ಅವಶ್ಯಕ ಮಾನವ ಸಂಪನ್ಮೂಲವನ್ನು ನೇಮಕಾತಿ ಮಾಡಿಕೋಳ್ಳುವ ನಿಟ್ಟಿನಲ್ಲಿ ಖಾಯಂ ಆಗಿ ಕಾರ್ಯ ನಿರ್ವಹಿಸುವ ಕಾರ್ಮಿಕರು ಹಾಗೂ ವ್ಯಕ್ತಿ, ನಿಯೋಗ ಅಥವಾ ಇತರ ಯಾವುದೇ ಮೂಲಗಳಿಂದ ಭರ್ತಿ ಮಾಡಿಕೊಂಡು ಕೈಗಾರಿಕೆಗಳಲ್ಲಿ ಕಾರ್ಯನಿರ್ವಸುವ ಕಾರ್ಮಿಕರನ್ನು ಗುತ್ತಿಗೆ ಆಧಾರದ ಮೇಲೆ ಕಾರ್ಯನಿರ್ವಹಿಸುವ ಕಾರ್ಮಿಕರು ಎನ್ನುವರು, ಭಾರತ ಸಂವಿಧಾನದ ರಾಜ್ಯ ನಿರ್ದೇಶಕ ತತ್ವಗಳ ಆಧಾರದಲ್ಲಿ ಕಲಂ 39ಡಿ ರಲ್ಲಿ ಸಮಾನ ಕೆಲಸಕ್ಕೆ ಸಮಾನ ವೇತನ ಕಾಯ್ದೆಯಂತೆ, ಕಲಂ 43 ರಲ್ಲಿ ಕಾರ್ಮಿಕರಿಗೆ ಉತ್ತೇಜನಕಾರಿ ದಿನಗೂಲಿ, 43ಎ ರಲ್ಲಿ ಕಾರ್ಖಾನೆಗಳ ಆಡಳಿತದಲ್ಲಿ ಕಾರ್ಮಿಕರ ಭಾಗವಹಿಸುವಿಕೆ ಹಾಗೂ ಹಲವು ಬಾರಿ ಸರ್ವೋಚ್ಚ ನ್ಯಾಯಲಯವು ವಿಷಯ ಪ್ರಸ್ತಾಪಿಸಿದ್ದರೂ ಕೂಡ ಇದುವರೆಗೂ ಖಾಯಂ ಮತ್ತು ಗುತ್ತಿಗೆ ಆಧಾರದ ಮೇಲೆ ಕಾರ್ಯನಿರ್ವಸುವ ಕಾರ್ಮಿಕರಿಗೆ ಇರುವ ಸೌಲಭ್ಯಗಳಲ್ಲಿ ತಾರತಮ್ಯ ಇರುವುದು ನೋಡಬಹುದಾಗಿದೆ. ಗುತ್ತಿಗೆ ಅಧಾರದ ಮೇಲೆ ಕಾರ್ಯನಿರ್ವಸುವ ಕಾರ್ಮಿಕರು ವಿಶೇಷ ತಂತ್ರ, ಕೌಶಲ್ಯ, ಪರಿಣಿತಿ ಪಡೆದಿದ್ದರೂ ಸಹಿತ ಅವರಿಂದ ಗರಿಷ್ಠ ಪ್ರಮಾಣದ ಲಾಭ ಪಡೆಯುವ ನಿಟ್ಟಿನಲ್ಲಿ ಹಾಗೂ ಕಂಪನಿಯ ಸಾಮರ್ಥ್ಯ ವೃದ್ದಿಸಿಕೊಳ್ಳುವಲ್ಲಿ ಕಂಪನಿಗಳು ಗುತ್ತಿಗೆ ಕಾರ್ಮಿಕರ ಮೇಲೆ ಅವಲಂಬಿತವಾಗಿವೆ.

ಕಂಪನಿಯ ಖಾಯಂ ಕಾರ್ಮಿಕರಿಗೂ ಹಾಗೂ ಕಂಪನಿಯಲ್ಲಿ ಗುತ್ತಿಗೆ ಅಧಾರದ ಮೇಲೆ ಕಾರ್ಯನಿರ್ವಹಿಸುವ ಕಾರ್ಮಿಕರಿಗೂ ಕೆಲಸದ ಸ್ಥಿತಿಗತಿ, ವೇತನ ಶ್ರೇಣಿ, ನೇಮಕಾತಿ ವಿಧಾನಗಳು,

ಸಂಬಂಧಿಸಿದ ಕಾಯ್ದೆ ಕಾನೂನುಗಳು ಹಾಗೂ ವಿವಿಧ ಕೈಗಾರಿಕೆ ಸೌಲಭ್ಯಗಳಲ್ಲಿ ವ್ಯತ್ಯಾಸಗಳಿವೆ.

**ಪ್ರಮುಖ ಕಾಯ್ದೆಗಳು**

1. ಕಾರ್ಖಾನೆ ಕಾಯ್ದೆ. 1948
2. ಹೆರಿಗೆ ಲಾಭದ ಕಾಯ್ದೆ 1961
3. ನೌಕರರ ರಾಜ್ಯ ವಿಮಾ ಕಾಯ್ದೆ 1948
4. ಉದ್ಯೋಗಿಗಳ ಪ್ರಾವಿಡಂಟ್ ಫಂಡ್ ಯೋಜನೆ 1952
5. ಬೋನಸ್ ಕಾಯ್ದೆ 1965
6. ಕಾರ್ಮಿಕ ಸಂಘಟನೆ ಕಾಯ್ದೆ 1926
7. ಕನಿಷ್ಠ ಕೂಲಿ ಕಾಯ್ದೆ 1948

**ಗುತ್ತಿಗೆ ಆಧಾರದ ಮೇಲೆ ಕಾರ್ಯನಿರ್ವಹಿಸುವ ಕಾರ್ಮಿಕರಿಗಿರುವ ಶಾಸನಬದ್ಧ ಸೌಲಭ್ಯಗಳು**

1. ಕುಡಿಯುವ ನೀರಿನ ವ್ಯವಸ್ಥೆ.
2. ಕುಳಿತುಕೊಳ್ಳಲು ಸೂಕ್ತ ಆಸನದ ವ್ಯವಸ್ಥೆ.
3. ಪ್ರಥಮ ಚಿಕಿತ್ಸೆ ಉಪಕರಣದ ಸೌಲಭ್ಯ
4. ಶೌಚಲಯಗಳ ವ್ಯವಸ್ಥೆ.
5. ಉಪಹಾರ ಕೇಂದ್ರಗಳನ್ನು ತೆರೆಯುವುದು.
6. ಸಲಕರಣ ಕೇಂದ್ರಗಳನ್ನು ತೆರೆಯುವುದು.
7. ಬೆಳಕಿನ ವ್ಯವಸ್ತೆ ಮಾಡುವುದು.
8. ವಿಶ್ರಾಂತಿ ಕೊಠಡಿಗಳು
9. ತೊಳೆಯುವ ಸ್ಥಳಗಳು
10. ಮಾತೃತ್ವ ರಜೆಗಳಿಕೆ.
11. ಬದಲಾಗುತ್ತಿರುವ ಕೊಠಡಿಗಳು
12. ಮೆದಿ ಕ್ಲೇಮ್ ವೀಮಾ ಯೋಜನೆ.
13. ಮಹಿಳೆಯರು ಕಾರ್ಯನಿರ್ವಹಿಸುವ ಸ್ಥಳದಲ್ಲಿ ಲೈಂಗಿಕ ಕಿರುಕುಳ ನೀತಿ.

**ಗುತ್ತಿಗೆ ಆಧಾರದ ಮೇಲೆ ಕಾರ್ಯನಿರ್ವಹಿಸುವ ಕಾರ್ಮಿಕರಿಗಿರುವ ಶಾಸನಬದ್ಧವಲ್ಲದ ಸೌಲಭ್ಯಗಳು**

1. ವಯಕ್ತಿಕ ಸ್ವಚತೆ
2. ಫ್ಲೆಕ್ಸಿಟೈಮ್
3. ಉದ್ಯೋಗಿ ನೆರವು ಕಾರ್ಯಕ್ರಮಗಳು
4. ವಸತಿಯನ್ನು ಒದಗಿಸುವುದು
5. ಉದ್ಯೋಗಿ ಉಲ್ಲೇಖಿತ ಯೋಜನೆ
6. ವಿದ್ಯಾರ್ಥಿ ವೇತನವನ್ನು ಒದಗಿಸುವುದು
7. ಸಾರಿಗೆ ವ್ಯವಸ್ತೆ

ಪ್ರಸ್ತುತ ಸಂದರ್ಭದಲ್ಲಿ ಕರ್ನಾಟಕ ರಾಜ್ಯದ ಕೈಗಾರಿಕೆಗಳಲ್ಲಿ ಉದ್ದಿಮೆದಾರರು ಅಥವಾ ಮಾಲಿಕರು ಕಂಪನಿಯ ಉತ್ಪಾದನೆಯನ್ನು ಹೆಚ್ಚಿಸುವ ನಿಟ್ಟಿನಲ್ಲಿ ಮತ್ತು ಖಾಯಂ ನೌಕರರನ್ನು ಬೆರಳೆಣಿಕೆಯಷ್ಟು ಮಾತ್ರ ನೇಮಕ ಮಾಡಿಕೊಂಡು ಸಂಸ್ಥೆಗೆ ಅಗತ್ಯವಿರುವ ಗರಿಷ್ಟ ಸಿಬ್ಬಂದಿಯನ್ನು ಗುತ್ತಿಗೆ ಆಧಾರದ ಮೇಲೆ ನೇಮಕಾತಿ ಮಾಡಿಕೊಂಡು ಅವರಿಂದ ಕಂಪನಿಯ ಗರಿಷ್ಟ ಲಾಭ ಮಾಡುವುದಾಗಿದೆ,

**ಸಮಸ್ಯೆಯ ಹೇಳಿಕೆ**

**ಆ**ಧುನಿಕ ಕಾಲದಲ್ಲಿ ಕೈಗಾರೀಕರಣವು ಇಲ್ಲದೆ ಮಾನವ ಜೀವನ ನೆಡೆಸುವುದು ಕಷ್ಟಸಾಧ್ಯವಾಗಿದೆ ಬೃಹತ್ ಕೈಗಾರೀಕರಣದಿಂದ ಮಾನವ ಸಮಾಜವು ಹಲವು ಸಮಸ್ಯೆಗಳನ್ನು ಎದುರಿಸುತ್ತಿದೆ ಇದರಲ್ಲಿ ಪ್ರಮುಖವಾಗಿ ಗುತ್ತಿಗೆ ಆಧಾರದ ಮೇಲೆ ಕಾರ್ಯ ನಿರ್ವಹಿಸುವ ಕಾರ್ಮಿಕರ ವೇತನ ಶ್ರೇಣಿ, ಖಾಯಂ ಹಾಗೂ ಗುತ್ತಿಗೆ ಕಾರ್ಮಿಕರ ನಡುವಿನ ವ್ಯತ್ಯಾಸಗಳು,ಗುತ್ತಿಗೆದಾರರು ಹಾಗೂ ಕಾರ್ಮಿಕರ ನಡುವಿನ ಸಂಬಂಧಗಳ ಕುರಿತು ಅಧ್ಯಯನ ಮಾಡುವುದಾಗಿದೆ.

**ಸಾಹಿತ್ಯಿಕ ಆಧಾರಗಳು**

ಸ್ವರ್ಣಲತ 2016, ಇವರು ಗುತ್ತಿಗೆ ಕಾರ್ಮಿಕರ ಕೆಲಸ ತೃಪ್ತಿಯ ಬಗ್ಗೆ ಅಧ್ಯಯನ ನೆಡೆಸಿದ್ದಾರೆ. ಗುತ್ತಿಗೆ ಕಾರ್ಮಿಕರ ಕೆಲಸದ ತೃಪ್ತಿ ಹಾಗೂ ಸಂಘಟನೆಯು ಅತ್ಯಂತ ಕಷ್ಟಕರವಾದುದು ಎಂದು ಪ್ರತಿನಿಧಿಸುತ್ತದೆ. ಇದನ್ನು ಸಮಾನ್ಯವಾಗಿ ಉತ್ಪಾದಕತೆ ಮತ್ತು ವೈಯಕ್ತಿಕ ಯೋಗಕ್ಷೇಮಕ್ಕೆ ನೇರವಾಗಿ ಸಂಬಂದಿಸಿದೆ ಎಂದು ಗ್ರಹಿಸಲಾಗಿದೆ. ವಿಶೇಷವಾಗಿ ಗುತ್ತಿಗೆ ಕಾರ್ಮಿಕರ ವಿಷಯದಲ್ಲಿ ಉದ್ದಿಮೆದಾರರು ತಮ್ಮ ಕೆಲಸದಲ್ಲಿ ತೃಪ್ತರಾಗಲು ಹೋರಾಟ ಮಾಡುತ್ತಿದ್ದಾರೆ ಈ ಅಧ್ಯಯನವು ಸ್ಟರ್‌ಲೈಟ್ ಉದ್ಯಮದಲ್ಲಿ ಕಾರ್ಮಿಕರ ಕೆಲಸ ತೃಪ್ತಿಯ ಬಗ್ಗೆ ವಿಶ್ಲೇಷಿಸಿದೆ.

ಎಮ್ ಮಣಿಶೇಖರ್ 2014, ಇವರ ಅಧ್ಯಯನದ ಪ್ರಕಾರ ಭಾರತದಲ್ಲಿ ಗುತ್ತಿಗೆ ಕಾರ್ಮಿಕರ ವ್ಯವಸ್ಥೆಯ ಅವಲೋಕನ ಕುರಿತು ಎಂಬ ಶಿರ್ಷಿಕೆ ಅಡಿಯಲ್ಲಿ ಇಪ್ಪತ್ತು ಅಥವಾ ಹೆಚ್ಚು ಕಾರ್ಮಿಕರನ್ನು ಗುತ್ತಿಗೆ ಕಾರ್ಮಿಕರನ್ನಾಗಿ ನೇಮಕ ಮಾಡಿದರೆ ಕಾಯ್ದೆ ಅನ್ವಯಿಸುತ್ತದೆ. ಹಿಂದಿನ ಹನ್ನೆರಡು ತಿಂಗಳು ಮತ್ತು ಯಾವುದೇ ಗುತ್ತಿಗೆರಾರರಿಗೆ ಇಪ್ಪತ್ತು ಅಥವಾ ಅದಕ್ಕೂ ಹೆಚ್ಚಿನ ಕೆಲಸಗಾರರನ್ನು ಯಾವುದೇ ಹನ್ನೆರಡು ತಿಂಗಳೊಳಗೆ ಕಾಯ್ದೆ ಪ್ರಕಾರ ಕಂಪನಿಯು, ವ್ಯಕ್ತಿ ಅಥವಾ ಗುತ್ತಿಗೆದಾರರ ಮೂಲಕ ಕೆಲಸ ಮಾಡುತ್ತಿದ್ದರು ಕೂಡ ಕಂಪನಿಯ ಪ್ರಮುಖ ಉದ್ಯೋಗದಾತನು. ಈ ಅಧ್ಯಯನದ ಪ್ರಕಾರ ಕಾಯ್ದೆ ಮತ್ತು ಪ್ರಸ್ತುತ ಸ್ಥಿತಿ, ಕಾನೂನು ಚೌಕಟ್ಟು, ಕೆಲಸ ಇತರ ಸಂಬದಿಸಿದ ಕಾನೂನುಗಳು ರಾಜ್ಯಮಟ್ಟದ ಬದಲಾವಣೆಗಳು ಮತ್ತು ಪ್ರಸ್ತುತ ಸಮಸ್ಯೆಗಳ ಹಾಗೂ ತಿರ್ಮಾನಗಳ ಕುರಿತಾದ ಸರಾಂಶವನ್ನು ಹೊಂದಿದೆ

ದೆಬಿ ಎಸ್ ಸೈನಿ, 2010, ದಿ ಕಾಂಟ್ರಕ್ಟ್ ಲೇಬರ್ ಆಕ್ಟ್ 1970 ಇಷ್ಯುಸ್ ಅಂಡ್ ಕನ್ಸರ್ನ್, ಎಂಬ ಪತ್ರಿಕೆಯು ಭಾರತದಲ್ಲಿ ಗುತ್ತಿಗೆ ಕಾರ್ಮಿಕರಿಗಿರುವ ಕಾನೂನು ಚೌಕಟ್ಟನ್ನು ನಿರ್ಣಯಿಸುತ್ತದೆ, ಕಾಂಟ್ರಕ್ಟ್ ಲೇಬರ್ (ನಿಯಂತ್ರಣ ಮತ್ತು ನಿರ್ಮೂಲನೆ ) ಕಾಯಿದೆ 1970 ಜಾರಿಗೊಳಿಸುವಲ್ಲಿ ರಾಜ್ಯದ ಪಾತ್ರವನ್ನು ಇದು ವಿಮರ್ಶಿಸುತ್ತದೆ. ಇದು ರಾಜ್ಯದ ಏಜೆನ್ಸಿಗಳ ಬದಲಾದ ವರ್ತನೆಗಳನ್ನು ಕೇಂದ್ರಿಕರಿಸುತ್ತದೆ. ಉದ್ಯೋಗದಾತರ ಅತಿರೇಕದ ಪ್ರವೃತ್ತಿಯನ್ನು ಪರೀಕ್ಷಿಸಲು ಕಾಂಟ್ರಕ್ಟ್ ಲೇಬರ್ ಆಕ್ಟ್ ಚೌಕಟ್ಟಿನಲ್ಲಿ ಅಗತ್ಯವಿದೆ ಎಂದು ದ್ವಿತಿಯ ದತ್ತಂಶ ಮತ್ತು ಸೈದ್ಧಾಂತಿಕ ತಾರ್ಕಿಕ ಕ್ರೀಯೆಗಳ ಮೇಲೆ ಸೂತ್ರಗಳನ್ನು ನಿರ್ಮಿಸಲಾಗಿದೆ. ಅಂಧ್ರಪ್ರದೇಶ ರಾಜ್ಯದಲ್ಲಿ ಗುತ್ತಿಗೆ ಕಾರ್ಮಿಕರಿಗೆ ಸಂಬಂದಿಸಿದಂತೆ ಇನ್ನು ಸುಧಾರಣಾ ಕ್ರಮಗಳನ್ನು ಕೈಗೊಳ್ಳಬೇಕೆಂದು ತಿಳಿಸಿದೆ

**ಅಧ್ಯಯನದ ಉದ್ದೇಶಗಳು**

- ಗುತ್ತಿಗೆ ಅಧಾರದ ಮೇಲೆ ಕಾರ್ಯನಿರ್ವಹಿಸುವ ಕಾರ್ಮಿಕರಿಗಿರುವ ಕಾಯ್ದೆ, ಕಾನೂನು ಹಾಗೂ ಸೌಲಭ್ಯಗಳ ಬಗ್ಗೆ ತಿಳಿದುಕೊಳ್ಳುವುದು.
- ಕೈಗಾರಿಕಗಳಲ್ಲಿ ಗುತ್ತಿಗೆ ಕಾರ್ಮಿಕರಿಗೂ ಹಾಗೂ ಖಾಯಂ ನೌಕರರಿಗೆ ಇರುವ ವ್ಯತ್ಯಾಸಗಳ ಬಗ್ಗೆ ವಿಶ್ಲೇಷಣೆ ಮಾಡುವುದು.
- ಗುತ್ತಿಗೆದಾರರು ಹಾಗೂ ಗುತ್ತಿಗೆ ಕಾರ್ಮಿಕರ ಮದ್ಯ ಇರುವ ಸಂಬಂಧಗಳ ಬಗ್ಗೆ ಅರ್ಥೈಸಿಕೊಳ್ಳುವುದು.

**ಪ್ರಾಕಲ್ಪನೆಗಳು**

- ಗುತ್ತಿಗೆ ಅಧಾರದ ಮೇಲೆ ಕಾರ್ಯನಿರ್ವಹಿಸುವ ಕಾರ್ಮಿಕರು ಖಾಯಂ ನೌಕರರಿಗಿಂತ ಕಡಿಮೆ ಸೌಲಭ್ಯಗಳನ್ನು ಹೊಂದಿರುತ್ತಾರೆ.
- ಸಮಾನ ಕೆಲಸಕ್ಕೆ ಸಮಾನ ವೇತನದಿಂದ ಗುತ್ತಿಗೆ ಕಾರ್ಮಿಕರು ವಂಚಿತರಾಗುತ್ತಿದ್ದಾರೆ
- ಗುತ್ತಿಗೆದಾರರು ಹಾಗೂ ಗುತ್ತಿಗೆ ಕಾರ್ಮಿಕರ ಮದ್ಯ ಕೆವಲ ವೃತ್ತಿಪರ ಸಂಬಂಧವಷ್ಟೆ ಇರುತ್ತದೆ.

**ಸಂಶೋಧನಾ ವಿಧಾನ**

ಪ್ರಸ್ತುತ ಸಂಶೋಧನೆಯನ್ನು ದ್ವಿತಿಯ ದತ್ತಾಂಶದ ಮೂಲಗಳ ಪ್ರಕಾರ ಅಂದರೆ ಸಾಹಿತ್ಯಿಕ ಅಧಾರಗಳ ಮೇಲೆ ಲೇಖನಗಳು, ಗುತ್ತಿಗೆ ಕಾರ್ಮಿಕರಿಗಿರುವ ಕಾಯ್ದೆ ಮತ್ತು ಕಾನೂನುಗಳು, ಪತ್ರಿಕೆಗಳು, ಪುಸ್ತಕಗಳು ಹಾಗೂ ಪ್ರಸ್ತುತ ಸಂದರ್ಭದಲ್ಲಿ ಗುತ್ತಿಗೆ ಕಾರ್ಮಿಕರ ಸನ್ನಿವೇಶಗಳ ಕುರಿತಾದ ಸಂಶೋಧಕನ ಅವಲೋಕನದ ಆಧಾರದ ಮೇಲೆ ವರದಿಯನ್ನು ತಯಾರಿಸಲಾಗಿದೆ.

**ಸಲಹೆಗಳು**

- ಖಾಯಂ ನೌಕರರಿಗೆ ಇರುವ ಸಂಬಳ ಹಾಗೂ ಸೌಲಭ್ಯಗಳು ಗುತ್ತಿಗೆ ಕಾರ್ಮಿಕರಿಗೂ ದೊರೆಯಬೇಕು.
- ಗುತ್ತಿಗೆ ಕಾರ್ಮಿಕರನ್ನು ಸೇವೆ ಹಾಗೂ ಜೇಷ್ಠತೆ ಆಧಾರದ ಮೇಲೆ ಕಂಪನಿಗಳಲ್ಲಿ ಖಾಯಂ ನೌಕರರನ್ನಾಗಿ ಮಾಡಿಕೊಳ್ಳಬೇಕು.
- ಗುತ್ತಿಗೆ ಕಾರ್ಮಿಕರು ಹಾಗೂ ಖಾಯಂ ಕಾರ್ಮಿಕರು ಎಂಬ ತಾರತಾಮ್ಯ ಇರಬಾರದು.
- ಎಲ್ಲಾರಿಗೂ ಸಮಾನವಾದ ಸಾಮಾಜಿಕ ಭದ್ರತೆಯನ್ನು ಒದಗಿಸುವುದು.
- ಗುತ್ತಿಗೆ ಕಾರ್ಮಿಕರಿಗೆ ಕಾರ್ಖಾನೆಗಳ ಆಡಳಿತ ಮಂಡಳಿಯಲ್ಲಿ ಭಾಗವಹಿಸುವಿಕೆಗೆ ಅವಕಾಶ ಕಲ್ಪಿಸುವುದು.

**ಆಧಾರ ಗ್ರಂಥಗಳು**

1. ರಮೇಶ ಎಂ,ಸೋನಕಾಂಬಳೆ, ಸಮಾಜಕಾರ್ಯ ವೃತ್ತಿ, ಶಾರದ ಪಬ್ಲಿಕೇಶನ್ಸ್, ಬಿಜಾಪುರ. ಪುಟಸಂಖ್ಯೆ 91 ರಿಂದ 98 ಮುದ್ರಣ 2012.
2. ಸಾಮಾನ್ಯ ಜ್ಞಾನ, ಚಾಣಕ್ಯ ಕರಿಯರ್ ಅಕಾಡೆಮಿ, ಬಿಜಾಪುರ, 4ನೇ ಪರಿಷ್ಕೃತ ಮುದ್ರಣ, 2014–15 ಪುಟಸಂಖ್ಯೆ 89 ರಿಂದ 94
3. ಬಿ.ಸ್ವರ್ಣಲತ, ಗುತ್ತಿಗೆ ಕಾರ್ಮಿಕರ ಕಾರ್ಯತೃಪ್ತಿಯ ಕುರಿತು ಒಂದು ಅಧ್ಯಯನ, ಇಂಟರ್‌ನ್ಯಾಷನಲ್ ಜರ್ನಲ್ ಅಪ್ ವರ್ಲ್ಡ ರಿಸರ್ಚ್, ಸಂಚಿಕೆ 1 ಇಷ್ಯ್ XXXVI, (December 2016,)
4. ದೇಬಿ ಎಸ್ ಸನ್ಯೆ, ಗುತ್ತಿಗೆ ಕಾರ್ಮಿಕರ ಕಾಯ್ದೆ 1970 ಇಷ್ಯಸ್ ಅಂಡ್ ಕನ್ಸರ್ನ್, ಇಂಡಿಯನ್ ಜರ್ನಲ್ ಅಪ್ ಇಂಡಸ್ಟ್ರಿಯಲ್ ರಿಲೇಷನ್ಸ್ ಇಷ್ಯ್, Vol. 46, No. 1, Pp32-44, 2010,
5. ಎಮ್ ಮಣಿಶೇಖರ್, ಆನ್ ಒವರ್ ವ್ಯೂವ್ ಆನ್ ಕಾಂಟ್ರಕ್ಟ್ ಲೇಬರ್ ಸಿಸ್ಟಮ್ ಇನ್ ಇಂಡಿಯಾ, ಇಂಟರ್‌ನ್ಯಾಷನಲ್ ಜರ್ನಲ್ ಅಪ್ ಅಕಾಡೆಮಿಕ್ ರೀಸರ್ಚ್ 2010